ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ರಸ್ತೆ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರುವುದರಿಂದ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗೆ ಆದೇಶ ಕೊಡುವ ಮೂಲಕ ಕೆಲಸವನ್ನು ಮಾಡಿಸುವುದಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ.

(ಖ) ಅಂಗನವಾಡಿ ಶಾಲೆಯ ಮಕ್ಕಳಿಗೆ ಉಪಹಾರ ತಯಾರಿಸುವ ಉರುವಲು ವೆಚ್ಚವನ್ನು ಭರಿಸುವ ಬಗ್ಗೆ.

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಅಧ್ಯಕ್ಷರೆ, ಈಗಾಗಲೇ ಅಂಗನವಾಡಿ ಕಾರ್ಯಕರ್ತೆಯರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅಂಗನವಾಡಿ ಸಹಾಯಕಿಯರಿಗೆ ಈಗ ಕೊಡುತ್ತಿರುವ ಸಂಬಳವೇ ಕಡಿಮೆ ಇದೆ. ಇದೂ ಅಲ್ಲದೇ ಅಂಗನವಾಡಿ ಶಾಲೆಯ ಮಕ್ಕಳಿಗೆ ಕೊಡುವ ಉಪಹಾರ ತಯಾರಿಸುವುದಕ್ಕೆ ಉರುವಲು ವೆಚ್ಚವನ್ನು ಇವರುಗಳೇ ಭರಿಸಬೇಕಾಗಿದೆ. ಕೆಲವು ಕಡೆ ಜಿಲ್ಲಾ ಪಂಚಾಯತಿಯವರೇ ಆ ವೆಚ್ಚವನ್ನು ಭರಿಸಬೇಕೆಂದು ಇದೆ. ಆದರೆ ಅವರು ಕೆಲವು ಕಡೆ ಕೊಡುತ್ತಿಲ್ಲವೆನ್ನುವ ತಕರಾರಿದೆ. ನಗರ ಪ್ರದೇಶಗಳ ಅಂಗನವಾಡಿ ಕಾರ್ಯಕರ್ತೆಯರಂತೂ ತಮಗೆ ಬರುತ್ತಿರುವ ಸಂಬಳವೇ ಕಡಿಮೆ ಇರುವುದರಿಂದ ಉರುವಲು ವೆಚ್ಚವನ್ನು ಕೂಡ ತಾವೇ ಭರಿಸಿಕೊಳ್ಳಲು ಸಾಧ್ಯವಿಲ್ಲವೆಂದು ಹೇಳುವುದರಿಂದ ಮಕ್ಕಳಿಗೆ ಪೌಷ್ಟಿಕ ಆಹಾರ ತಪ್ಪಿಹೋಗುವ ಭಯವಿದೆ. ಆದುದರಿಂದ ಉರುವಲು ವೆಚ್ಚ ಕೊಡುವುದಕ್ಕೆ ಸಂಬಂಧಪಟ್ಟಂತೆ ಸ್ಪಷ್ಟ ನೀತಿಯನ್ನು ಅನುಸರಿಸಬೇಕು. ಆದುದರಿಂದ ಮಕ್ಕಳಿಗೆ ನೀವು ಸಿದ್ಧವಾದ ಆಹಾರವನ್ನು ಕೊಡುತ್ತೀರೋ, ಗ್ಯಾಸ್ ವ್ಯವಸ್ಥೆಯನ್ನೇನಾದರೂ ಮಾಡುತ್ತಿರೋ ಅಥವಾ ಉರುವಲು ವೆಚ್ಚವನ್ನು ಕೊಡುತ್ತೀರೋ, ಇವುಗಳಲ್ಲಿ ಯಾವುದೇ ಒಂದು ರೀತಿಯಲ್ಲಿ ವ್ಯವಸ್ಥೆ ಮಾಡಿ ಸಮಸ್ಯೆಯನ್ನು ಪರಿಹರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ವಿಮಲಾಬಾಯಿ ದೇಶಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ): ಮಾನ್ಯ ಅಧ್ಯಕ್ಷರೆ ಪ್ರತಿ ತಿಂಗಳಿಗೆ ೭೫-೦೦ ರೂ.ಗಳಂತೆ ಗ್ರಾಮ ಪಂಚಾಯತಿಯಿಂದ ಉರುವಲು ವೆಚ್ಚವೆಂದು ಮತ್ತು ಮಂಡಲ ಪಂಚಾಯತಿಯಿಂದ ಸೀಮೆ ಎಣ್ಣೆಯನ್ನು ಕೊಡಲಾಗುತ್ತಿದೆ. ಆದುದರಿಂದ ಅವರುಗಳು ಈ ಸೌಲಭ್ಯವನ್ನು ಪಡೆದು ಕೊಳ್ಳುತ್ತಿದ್ದಾರೆಂದು ಹೇಳಬಯಸುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್ : ಸೀಮೆ ಎಣ್ಣೆಯನ್ನು ಕೊಡುತ್ತಿಲ್ಲವಾದ್ದರಿಂದ ಸಮಸ್ಯೆ ಉದ್ಭವವಾಗಿರುವುದು.

ಅಧ್ಯಕ್ಷರು : ಸೀಮೆ ಎಣ್ಣೆ ಕೊಡುವುದಕ್ಕೆ ಸ್ಪಷ್ಟವಾಗಿ ಆದೇಶ ಹೊರಡಿಸಿ ಸೀಮೆ ಎಣ್ಣೆಯನ್ನು ಅಂಗನವಾಡಿಗಳಿಗೆ ಒದಗಿಸಿ.

ಶ್ರೀಮತಿ ವಿಮಲಾಬಾಯಿ ದೇಶಮುಖ್ : ಖಚಿತವಾಗಿ ಇಂಥ ಕಡೆ ಕೊಟ್ಟಿಲ್ಲವೆಂದರೆ ಸೀಮೆ ಎಣ್ಣೆ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಲಾಗುವುದು.